# ಅಮಿತಾಭ್ ಮೊಮ್ಮಗಳು ಸಿನಿಮಾಕ್ಕೆ?

ಬಾಲಿವುಡ್‌ನಲ್ಲಿ ಪ್ರವೇಶ ಪಡೆಯಲು ಮತ್ತು ನೆಲೆ ನಿಲ್ಲಲು ಅಗಾಧ ಪ್ರತಿಭೆಯಿದ್ದರೆ ಸಾಲದು. ಅದಕ್ಕೆ ಬಿಟೌನ್‌ನಲ್ಲಿ ಬೇರು ಬಿಟ್ಟಿರುವ ಕುಟುಂಬದ ಬೆಂಬಲವೂ ಇರಬೇಕು ಎನ್ನುವುದು ಚಾಲ್ತಿಯಲ್ಲಿರುವ ಮಾತು. ಇದಕ್ಕೆ ಅಪವಾದ ಎಂಬಂತೆ ಕೆಲವರು ಯಾರ ಬೆಂಬಲವೂ ಇಲ್ಲದೆ ಸ್ವತಃ ಗುರುತಿಸಿಕೊಂಡಿರುವ ಉದಾಹರಣೆಗಳಿವೆ. ಆದರೆ ಅವರ ಸಂಖ್ಯೆ ಬೆರಳಣಿಕೆಯಷ್ಟು. ಹಾಗೆಯೇ ಬಾಲಿವುಡ್‌ನ ಎಲ್ಲರೂ ತಮ್ಮ ಮಕ್ಕಳನ್ನು ಸಿನಿಮಾಕ್ಕೆ ಕರೆ ತರಲು ಬಯಸುತ್ತಾರೆ ಎನ್ನುವಂತಿಲ್ಲ. ಇವರಲ್ಲಿ ಶ್ವೇತಾ ಬಚ್ಚನ್ ನಂದಾ ಕೂಡ ಒಬ್ಬರು.

ಅಮಿತಾಭ್ ಬಚ್ಚನ್ ಮತ್ತು ಜಯಾ ಮಗಳು ಶ್ವೇತಾ ಪತ್ರಕರ್ತೆಯಾಗಿ ಕೆಲಸ ಮಾಡಿದಾಕೆ. ಅಪ್ಪ, ಅಮ್ಮ ಮತ್ತು ಅಣ್ಣನಂತೆ ಶ್ವೇತಾ ಸಿನಿಮಾಕ್ಕೆ ಬಣ್ಣ ಹಚ್ಚಿದವಳಲ್ಲ. ಶ್ವೇತಾಳ ಪತಿ ನಿಖಿಲ್ ನಂದಾ, ರಾಜ್‌ಕಪೂರ್ ಕುಟುಂಬದಲ್ಲಿ ಜನಿಸಿದವರು. ಹೀಗೆ ಕಲಾವಿದರ ಕುಟುಂಬದ ಕುಡಿಯಾದ ಶ್ವೇತಾಳ ಮಗಳು ನವ್ಯಾ ನವೇಲಿ ಚಿತ್ರರಂಗಕ್ಕೆ ಬರಲಿದ್ದಾಳೆಯೇ? ಈ ಪ್ರಶ್ನೆ ಚಿಂತೆಯಾಗಿ ಕಾಡಿರುವುದು ಸ್ವತಃ ಶ್ವೇತಾಗೆ. 42ರ ಹರೆಯದ ಶ್ವೇತಾಳ ಹತ್ತೊಂಬತ್ತರ ಮಗಳು ನವ್ಯಾ ಈಗಷ್ಟೇ ಕಾಲೇಜು ಮುಗಿಸಿದ್ದಾಳೆ. 'ಆಕೆ ತಾನೂ ಸಿನಿಮಾಕ್ಕೆ ಬರಬೇಕು ಎಂದು ಬಯಸಿದರೆ ಏನು ಮಾಡುವುದು' ಎನ್ನುವುದು ಶ್ವೇತಾಗೆ ಎದುರಾಗಿರುವ ಯೋಚನೆ. ಸಿನಿಮಾ ನಟಿಯಾಗುವುದು ಸುಲಭದ ಮಾತಲ್ಲ. ಅದಕ್ಕೆ ಕಠಿಣ ಪರಿಶ್ರಮ ಬೇಕು. ಇಲ್ಲಿ ಸೋಲುಗಳ ಸಾಧ್ಯತೆ ನೈಜವಾಗಿರುತ್ತದೆ. ಅವುಗಳನ್ನು ಎದುರಿಸುವ ಛಾತಿಯೂ ಬೇಕು ಎನ್ನುವುದು ಆಕೆಯ ಆತಂಕಕ್ಕೆ ಕಾರಣ.

'ನಟನೆ ನೋಡಿದಷ್ಟು ಸುಲಭವಲ್ಲ. ಅದನ್ನೆಲ್ಲ ಆಕೆ ಎದುರಿಸಬಲ್ಲಳು ಎಂದು ನಂಬುವುದು ಕಷ್ಟ. ಅಲ್ಲದೆ, ಇದು ಗೆಲುವಿನಂತೆಯೇ ಸೋಲನ್ನೂ ಒಳಗೊಂಡಿರುವ ಕ್ಷೇತ್ರ. ಇದು ಜನರಿಗೆ ತಿಳಿಯುವುದೂ ಇಲ್ಲ. ವೈಫಲ್ಯ ಎನ್ನುವುದು ಇಲ್ಲಿ ವೈಯಕ್ತಿಕ. ತೆರೆಯ ಮೇಲಿನ ಅಭಿನಯ ಕೌಶಲ ಮತ್ತು ಅಲ್ಲಿ ಕಾಣಿಸುವ ಬಗೆ ಮಾತ್ರ ಹೊರಜಗತ್ತಿನ ಗಣನೆಗೆ ಬರುತ್ತದೆ' ಎನ್ನುವುದು ಶ್ವೇತಾ ತರ್ಕ. ನವ್ಯಾ, ಶಾರುಖ್ ಖಾನ್ ಮಗ ಆರ್ಯನ್‌ನ ಸಹಪಾಠಿ. ಆರ್ಯನ್ ಸಿನಿಮಾ ಪ್ರವೇಶದ ಬಗ್ಗೆ ಮಾತುಗಳು ಕೇಳಿಬರುತ್ತವೆ. ನವ್ಯಾಳ ಚಿತ್ರಗಳೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಾ, ಊಹಾಪೋಹಗಳನ್ನು ಸೃಷ್ಟಿಸುತ್ತಿವೆ. ಚಿತ್ರರಂಗಕ್ಕೆ ಕಾಲಿಡುವ ಬಗ್ಗೆ ಆಕೆ ಬಹಿರಂಗವಾಗಿ ಮಾತನಾಡಿಲ್ಲ.





# ಟ್ವಿಂಕಲ್, ಟ್ವಿಂಕಲ್ ಬಿಗ್ ಸ್ಟಾರ್!

ಕಥೆ, ಕಾದಂಬರಿಯ ಗುಂಗಿನಲ್ಲಿ ಮುಳುಗಿದ್ದ ಟ್ವಿಂಕಲ್ ಖನ್ನಾ, ಈಗ ಮತ್ತೆ ಸಿನಿಮಾದತ್ತ ಮುಖ ಮಾಡಿದ್ದಾಳೆ.

ನಾಯಕಿಯಾಗಿ ಬಿಟೌನ್‌ನ ವೃತ್ತಿ ಬದುಕನ್ನು ಕೊನೆಗೊಳಿಸಿರುವ ಟ್ವಿಂಕಲ್, ಆಗಾಗ ನಟನೆಯ ಎರಡನೆಯ ಇನ್ನಿಂಗ್ಸ್ ಪ್ರಾರಂಭಿಸುವ ಸೂಚನೆ ನೀಡುತ್ತಿದ್ದಳು. ಆದರೆ ಆಕೆ ಹೊಸ ಇನ್ನಿಂಗ್ಸ್ ಪ್ರಾರಂಭಿಸಿರುವುದು ನಿರ್ಮಾಪಕಿಯ ಪಾತ್ರದಲ್ಲಿ! ಮತ್ತೆ ಬಣ್ಣ ಹಚ್ಚಲು ಆಸಕ್ತಿ ತೋರಿಸದ ಟ್ವಿಂಕಲ್, ನಿರ್ಮಾಪಕಿಯಾಗಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾಳೆ. 'ಮಿಸ್ ಫನ್ನಿಬೋನ್ಸ್ ಮೂವೀಸ್' ಆಕೆಯ ನಿರ್ಮಾಣ ಸಂಸ್ಥೆಯ ಹೆಸರು. ಮೊದಲ ಚಿತ್ರಕ್ಕೆ ಆರ್. ಬಾಲ್ಕಿಯಂತಹ ನಿರ್ದೇಶಕರನ್ನೇ ಆಕೆ ಆಯ್ಕೆ ಮಾಡಿಕೊಂಡಿದ್ದಾಳೆ. ಇನ್ನು ನಾಯಕ ಯಾರು ಎಂದು ಕೇಳುವ ಅಗತ್ಯವೇ ಇಲ್ಲ. ಪತಿರಾಯ ಅಕ್ಷಯ್ ಕುಮಾರ್ ಹೊಸ ಸಾಹಸಕ್ಕೆ ಸಿದ್ಧಗೊಳ್ಳುತ್ತಿದ್ದಾನೆ. ಸೋನಂ ಕಪೂರ್ ಮತ್ತು ರಾಧಿಕಾ ಆಪ್ಟೆ ನಾಯಕಿಯರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇನ್ನು ಅಮಿತಾಭ್ ಬಚ್ಚನ್ ಕೂಡ ವಿಶೇಷ ದರ್ಶನ ನೀಡಲಿದ್ದಾರೆ.

ಅಂದ ಹಾಗೆ, ಈ ಚಿತ್ರದ ವಸ್ತುವಿನ ಪರಿಕಲ್ಪನೆ ಸ್ವತಃ ಟ್ವಿಂಕಲ್‌ಳದ್ದು. ಅದನ್ನು ಅಭಿವೃದ್ಧಿಪಡಿಸಿ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿರುವುದು ಬಾಲ್ಕಿ. ಬರಹಗಾರ್ತಿಯಾಗಿದ್ದರೂ ಟ್ವಿಂಕಲ್, ಚಿತ್ರದ ಬರವಣಿಗೆಯಲ್ಲಿ ತೊಡಗಿಸಿಕೊಂಡಿಲ್ಲ. ತನ್ನ ನಿರ್ಮಾಣಸಂಸ್ಥೆ ಮೂಲಕ ಪ್ರಯೋಗಾತ್ಮಕ ಮತ್ತು ಜನಪ್ರಿಯ, ಎರಡೂ ಮಾದರಿಯ ಸಿನಿಮಾಗಳನ್ನು ತರುವ ಉತ್ಸಾಹದಲ್ಲಿದ್ದಾಳೆ ಆಕೆ. ಸಿನಿಮಾ ಕುರಿತು ಅಕ್ಷಯ್‌ನನ್ನು ಕೇಳಿದರೆ, ಆತ ನೀಡುವ ಉತ್ತರ 'ಆಕೆ ನಿರ್ಮಾಪಕಿ. ನಾನು ಸಂಭಾವನೆಗಾಗಿ ದುಡಿಯುವ ಕೆಲಸಗಾರನಷ್ಟೇ'!

■ ಅಮಿ